ನವ ಮಂಗಳೂರು ಬಂದರಿನ ಗಂಗೊಳ್ಳಿಯಲ್ಲಿ ಅಥವಾ ನಾರ್ತ್ ಕೆನರಾದಲ್ಲಿ, ಸೌತ್ ಕೆನರಾದಲ್ಲಿ ಮಾಡಬೇಕಾಗಿದೆ. ಈಗಾಗಲೇ ನಾವು 3-4 ಸೆಂಟರ್ಸ್‌ನ್ನು ಸೂಚಿಸಿದ್ದೇವೆ. ಮಿನಿ ಫಿಶರೀಸ್ ಹಾರ್ಬರ್ಸ್ ಮಾಡಬೇಕೆಂದು ಸೂಚಿಸಿದ್ದೇವೆ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಆದಷ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತರಿ ಜಮೀನು ಬೆಳೆಗಳ ನಾಶ

246 (1402) ಶ್ರೀ ಕೆ. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕಂದಾಯ ಮತ್ತು ಗ್ರಾಮಾಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಸರ್ವೆ ನಂ. 41 ಮತ್ತು 56 ರಲ್ಲಿ ಒಟ್ಟು ಎಷ್ಟು ಎಕರೆ ತರಿ ಜಮಾನಿನ ಫಸಲು ಪ್ರತಿ ವರ್ಷ ನಾಶವಾಗುತ್ತದೆ; ಕಾರಣವೇನು?

ಆ) ಅರ್ಜಿದಾರರಿಗೆ ಸರ್ಕಾರದ ಅತಿವೃಷ್ಟಿ ಪರಿಹಾರ ಧನವನ್ನು ನೀಡಿದೆಯೇ? ಹಾಗಿದ್ದರೆ ಯಾವ ಯಾವ ವರ್ಷ ಎಷ್ಟೆಷ್ಟು ಹಣವನ್ನು ನೀಡಲಾಗಿದೆ ತಿಳಿಸಿ.

ಇ) ಅರ್ಜಿದಾರರು ಸರ್ಕಾರಕ್ಕೆ ಬರೆದ ಅರ್ಜಿಯ ಮೇಲೆ ತೆಗೆದುಕೊಂಡ ಸರ್ಕಾರದ ಕ್ರಮವೇನು; ಇನ್ನು ಮುಂದೆ ಸದರಿ ಜಮಾನಿನ ಫಸಲು ಹಾಳಾಗದಂತೆ ಸರ್ಕಾರ ಶೀಘ್ರವಾಗಿ ಸೂಕ್ತ ಕ್ರಮವನ್ನು ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಅತಿವೃಷ್ಟಿಯಿಂದ, ತೀರ್ಥಹಳ್ಳಿ ತಾಲ್ಲೂಕು ಕರಡಿಗ ಗ್ರಾಮದ ಸರ್ವೆ ನಂ. 41 ಮತ್ತು 56ರಲ್ಲಿ ತರಿ ಜಮಾನಿನ ಫಸಲು ನಾಶವಾದ ಬಗ್ಗೆ ವಿವರಗಳು ಈ ಕೆಳಕಾಣಿಸಿದಂತೆ ಇರುತ್ತದೆ.

ವರ್ಷ	ಸರ್ವೆ ನಂ. 41	ಸರ್ವೆ ನಂ. 56
1989	ಇಲ್ಲ	0.20 ಎಕರೆ
1991	ಇಲ್ಲ	2.05 ಎಕರೆ

ಇನ್ನುಳಿದ ವರ್ಷಗಳಲ್ಲಿ ಬೆಳೆ ಹಾನಿ ಆಗಿಲ್ಲ.

ಆ) ಹೌದು.

ಈ ಕೆಳಕಾಣಿಸಿದಂತೆ ಅರ್ಜಿದಾರರಾದ ಶ್ರೀ ವೀರನಾಯ್ಕ ಬಿನ್ ಮೋಟನಾಯ್ಕ ರವರಿಗೆ ಪರಿಹಾರ ಧನ ನೀಡಲಾಗಿದೆ.

1989 ರೂ. 500 ಪರಿಹಾರ ನೀಡಿದೆ.

1991 ರೂ. 250 ಪರಿಹಾರ ನೀಡಿದೆ.

ಇ) ಅರ್ಜಿದಾರರಿಗೆ 1989ನೇ ಸಾಲಿನಲ್ಲಿ ರೂ. 500 ಮತ್ತು 1991ನೇ ಸಾಲಿನಲ್ಲಿ ರೂ. 250.00 ಪರಿಹಾರವನ್ನು ಮಂಜೂರು ಮಾಡಿದೆ. ಸದ್ರಿ ವಿಷಯದ ಬಗ್ಗೆ ಭೂಸಾರ ಸಂರಕ್ಷಣೆ ಇಲಾಖೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಲಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಒಬ್ಬ ಹರಿಜನ ವ್ಯಕ್ತಿಯ ಸುಮಾರು ಎರಡುವರೆ ಎಕರೆ ಜಮೀನಿನಲ್ಲಿ ನೀರು ನಿಂತು ತೊಂದರೆಯಾಗಿದೆ. ಅದಕ್ಕೆ 1989ನೇ ಇಸವಿಯಲ್ಲಿ 500 ರೂಪಾಯಿಗಳನ್ನು ಮತ್ತು 1991ರಲ್ಲಿ 250 ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೀರಿ. ಇದು ಬಹಳ ಕಡಿಮೆ ಆಗಿದೆ. ಇದನ್ನು ಜಾಸ್ತಿ ಮಾಡಬೇಕೆ ಎನ್ನುವುದು ಒಂದು. ಇನ್ನು ಎರಡನೆಯದು, ಕಾಮಗಾರಿ ಮಾಡುವ ದೃಷ್ಟಿಯಿಂದ ತಹಶೀಲ್ದಾರ್‌ರವರು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ದಿನಾಂಕ 16-8-90ರಲ್ಲಿ ತಮ್ಮ ಪತ್ರದ ಸಂಖ್ಯೆ : ಸೀಆರ್ : 71 / 90-91 ರಲ್ಲಿ ಅಲ್ಲಿ ಕಾಮಗಾರಿ ಕೆಲಸ ಆವಶ್ಯಕತೆ ಇದೆ. ಮಾಡಬೇಕು ಎಂದು ಕಳುಹಿಸಿಕೊಟ್ಟಿದ್ದಾರೆ. ಅದರ ಬಗ್ಗೆ ಇನ್ನೂ ಏನೂ ಕಾರ್ಯಕ್ರಮ ಕೈಗೊಂಡಿಲ್ಲ. ಕಾಮಗಾರಿ ಕೆಲಸ ಮಾಡುವುದಕ್ಕೆ ಸರ್ಕಾರ ಗಮನ ಕೊಡುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಕೊಟ್ಟಂಥ ಪರಿಹಾರ ಕಡಿಮೆ ಇದೆ ಎನ್ನತಕ್ಕಂಥಾದ್ದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ನಮ್ಮ ಕಾನೂನಿನ ಅಡಿಯಲ್ಲಿ ಒಂದು ಹೆಕ್ಟೇರಿಗೆ 200 ರೂಪಾಯಿಗಳು ಕೊಡಬೇಕೆಂದು ಇದೆ. ಈ ಬಗ್ಗೆ ಅನೇಕ ಸಲ ವಾದ ಆಗಿರುವುದು ತಮಗೆಲ್ಲ ಗೊತ್ತಿದೆ. ಹೆಚ್ಚು ಕೊಡಬೇಕೆಂದು ಇದೆ. ಆದರೂ ಕೂಡ ನಾವು ರಾಜ್ಯ ಸರ್ಕಾರದವರು 100 ರೂಪಾಯಿಗಳನ್ನು ಹೆಚ್ಚು ಮಾಡಿ ಕೊಟ್ಟಿದ್ದೇವೆ. 200 ರೂಪಾಯಿ ಇದ್ದರೆ 300 ರೂಪಾಯಿಗಳನ್ನು ಮಾಡಿ ಕೊಟ್ಟಿದ್ದೇವೆ. ಇದು ಕೂಡ ಕಡಿಮೆ ಇದೆ. ಇನ್ನು ಕಾಮಗಾರಿ ಬಗ್ಗೆ ಹೇಳಿದ್ದಾರೆ. ನಾನು ಸಂಬಂಧಪಟ್ಟ ಸಾಯಿಲ್ ಕನ್‌ಜರ್‌ವೇಷನ್ ಡಿಪಾರ್ಟ್‌ಮೆಂಟ್‌ಗೆ ಹೇಳಿ ಅದನ್ನು ಮಾಡಿಸತಕ್ಕಂಥ ವ್ಯವಸ್ಥೆ ಮಾಡಿಸುತ್ತೇನೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಅನಧಿಕೃತ ಸಾಗುವಳಿ

250 (1403) ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಕಾದಿರಿಸಲಾದ ಅರಣ್ಯ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಹರಪನಹಳ್ಳಿಯಲ್ಲಿ ಕಾದಿರಿಸಲಾದ ಅರಣ್ಯ ಭೂಮಿಯ ಸರ್ವೆ ನಂ. 3 (ಎ) ಕಂಚೀಕೆರೆ ಮತ್ತು ಜತ್ತಿನಕಟ್ಟೆ ವಲಯದಲ್ಲೂ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಇ) ಹಾಗಿದ್ದಲ್ಲಿ, ಕ್ರಮವಾಗಿ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮಗೊಳಿಸಲು ಸರ್ಕಾರವು ಕೈಗೊಂಡ ಕ್ರಮವೆನು?

ಶ್ರೀ ಈ.ಟಿ. ಶಂಬುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಹರಪನಹಳ್ಳಿ ತಾಲ್ಲೂಕು ಕಂಚೀಕೆರೆ ಗ್ರಾಮ ಸರ್ವೆ ನಂ. 3(ಎ) ಜತ್ತಿನಕಟ್ಟೆ ಕಾದಿಟ್ಟ ಅರಣ್ಯದಲ್ಲಿನ ಅಕ್ರಮ ಸಾಗುವಳಿದಾರರ ಮೇಲೆ ಕೇಸು ದಾಖಲೆ ಮಾಡಿಕೊಂಡು